ಸಾಕ್ಷಿಗೆ ದಿನಾಂಕಃ 28-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಅದರಲ್ಲಿ ನಾನು ಸಹಿ ಮಾಡಿರುತ್ತೇನೆ.

ನಾನು ಈ ದಾವೆಯಲ್ಲಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಅವುಗಳನ್ನು ಈ ಕೆಳಕಂಡಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿಪಿ-1 | ದಿ 17-08-2022 ರಂದು ಆಗಿರುವ ನೊಂದಾಯಿತ ಕ್ರಯದ ಕರಾರು ಪತ್ರ, ಪ್ರತಿವಾದಿಗಳ ಸಹಿ ನಿಪಿ-1 ಎ ರಿಂದ ನಿಪಿ-1 ಸಿ ಎಂದು, ಸಾಕ್ಷಿಯ ಸಹಿ ನಿಪಿ-1 ಡಿ ಎಂದು, ಸಾಕ್ಷಿದಾರರಾದ ರಾಜಶೇಖರ್ ರವರ ಸಹಿ ನಿಪಿ-1 ಇ ಎಂದು, ಮತ್ತೊಬ್ಬ ಸಾಕ್ಷಿದಾರರಾದ ಪ್ರಶಾಂತ್ ರವರ ಸಹಿ ನಿಪಿ-1 ಎಫ್ ಎಂದು, ಪತ್ರ ಬರಹಗಾರರಾದ ಶಿವಲಿಂಗ ರವರ ಸಹಿ ನಿಪಿ-ಜಿ ಎಂದು ಗುರುತಿಸಲಾಯಿತು. |
| ನಿಪಿ-2 | ವಕೀಲರ ನೋಟೀಸ್ |
| ನಿಪಿ-3 | ಅಂಚೇ ರಶೀದಿಗಳು |
| ನಿಪಿ-4 | ಅಂಚೇ ಸ್ವೀಕೃತಿ ಹಿಂಬರಹಗಳು, ಪ್ರತಿವಾದಿಗಳ ಸಹಿಗಳು ನಿಪಿ-4 ಎ |

**ಪ್ರತಿವಾದಿ ಏಕಪಕ್ಷೀಯವಾಗಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು